## ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 690/2022

ಸಾಕ್ಷಿಗೆ ದಿನಾಂಕ 04-10-2024 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 3 P.W.: 1

| | | |
|---|---|---|
| ಹೆಸರು | ಃ | ಕುರುಡಪ್ಪ ಎ ಕೆ |
| ತಂದೆಯ ಹೆಸರು | ಃ | ಚನ್ನಬಸಪ್ಪ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ಬಿಲ್ ಕಲೆಕ್ಟರ್ |
| ವಾಸ ಸ್ಥಳ | ಃ | ಮಾಲವಿ ಗ್ರಾಮ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ನಾನು ಮಾಲವಿ ಪಂಚಾಯ್ತಿಯಲ್ಲಿ 2006 ರಿಂದ ಕರ್ತವ್ಯ ನಿರ್ವಹಿಸುತ್ತಾ ಬಂದಿರುತ್ತೇನೆ.

ದಿಃ 27-08-2022 ರಂದು ಕೋಗಳಿ ತಾಂಡದ ಲೈಬ್ರರಿಯಲ್ಲಿ ಕುರ್ಚಿ ಮತ್ತು ಗಡಿಯಾರ ಕಳುವಾಗಿದೆ ಅಂತಾ ಚಾಸಾ-1 ರವರಿಗೆ ಫೋನ್ ಬಂದಿತ್ತು ಅದರಂತೆ ನಾನು ಮತ್ತು ಚಾಸಾ-1 ಸೇರಿ ಸ್ಥಳಕ್ಕೆ ಹೋಗಿರುತ್ತೇವೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಸ್ಥಳ ಮತ್ತು ಜಪ್ತು ಪಂಚನಾಮೆಯಾಗಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಸದರಿ ದಾಖಲೆಯನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1ಎ ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ದಿಃ 27-08-2022 ರಂದು ಪೋಲೀಸ್ ಠಾಣೆಯಲಿಲ ಸಹಿ ಮಾಡಿರುತ್ತೇನೆ. ಆಗ ಬೆಳಿಗ್ಗೆ 10 ಗಂಟೆಯಾಗಿತ್ತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಕಚ್ಚಾ ನಕಾಶೆಯಾಗಿದ್ದು ಸಾಕ್ಷಿಯು ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಫೋಟೋ ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಕಳುವಾದ ವಿಚಾರಕ್ಕಾಗಿ ಸದರಿ ಕಳುವಿನ ಕುರ್ಚಿಗಳೊಂದಿಗೆ ಪೋಲೀಸ್ ಠಾಣೆಯಲ್ಲಿ ತೆಗೆದಿದ್ದು ಇರುತ್ತದೆ. ಸದರಿ ಕುರ್ಚಿಗಳನ್ನು ಚಾಸಾ-1 ರವರ ವಶಕ್ಕೆ ಪೋಲೀಸರು ಕೊಟ್ಟಿರುತ್ತಾರೆ. ಕುರ್ಚಿಗಳು ಮತ್ತು ಗಡಿಯಾರ ಸಮೇತ ನಮ್ಮ ಫೋಟೋಗಳನ್ನು

ತೆಗೆದುಕೊಂಡಿರುತ್ತಾರೆ. ಸದರಿ ಗಡಿಯಾರ ಮತ್ತು ಕುರ್ಚಿಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸದರಿ 15 ಕಬ್ಬಿಣದ ಕುರ್ಚಿಗಳು ಮತ್ತು ಒಂದು ಗಡಿಯಾರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಕುರ್ಚಿಗಳನ್ನು ಮು ಮಾ-1 ಎಂದು ಮತ್ತು ಗಡಿಯಾರವನ್ನು ಮು ಮಾ-2 ಎಂದು ಗುರುತಿಸಲಾಯಿತು. ಸದರಿ ಮು ಮಾಲುಗಳು ಕಳುವಾಗಿರುತ್ತವೆ ಅವು ಸಿಕ್ಕಿವೆ ಅಂತಾ ಹೇಳಿ ನಮ್ಮನ್ನು ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿದ್ದರು ಅದನ್ನು ವಶಪಡಿಸಿಕೊಂಡರು, ಉಳಿದ ವಿಚಾರ ನನಗೆ ಯಾವುದೂ ಗೊತ್ತಿಲ್ಲ.

ನನ್ನ ಜೊತೆ ಆ ದಿನ ಚಾಸಾ-1, 2 ಮತ್ತು 5 ರವರು ಇದ್ದರು. ಅವರೂ ಸಹಾ ಪಂಚನಾಮೆಗೆ ಸಹಿ ಮಾಡಿರುತ್ತಾರೆ. ಪಂಚನಾಮೆಯಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-

ಪಂಚನಾಮೆ ನಡೆದ ದಿನ ದಿಃ28-07-2022 ಎಂದರೆ ಸರಿ. ಸದರಿ ಕಳುವು ದಿನಾಂಕಃ26-07-2022 ರಂದು ಆಗಿತ್ತು ಎಂದರೆ ಸರಿ. ಚಾಸಾ-1 ರವರು ಆ ದಿನ ನನಗೆ ಕೋಗಳಿ ತಾಂಡದ ವಾಟರ್ ಫಿಲ್ಟರ್ ಬಳಿ ಕರೆದುಕೊಂಡು ಹೋದರೆಂದರೆ ಸರಿ. ಅಲ್ಲಿ ಸದರಿ ಕುರ್ಚಿಗಳನ್ನು ಮತ್ತು ಗಡಿಯಾರವನ್ನು ಇಟ್ಟಿದ್ದಾರಂತಾ ಪೋಲೀಸರು ನನಗೆ ತೋರಿಸಿದರೆಂದರೆ ಸರಿ. ಅದನ್ನು ನಾನು ಮತ್ತು ಚಾಸಾ-2 ರವರು ನೋಡಿರುತ್ತೇವೆಂದರೆ ಸರಿ. ಅದೇ ಸ್ಥಳದಲ್ಲಿ ಪೋಲೀಸರು ನಿಪಿ-1 ರಂತೆ ಪಂಚನಾಮೆಯನ್ನು ಮಾಡಿದ್ದರು ಎಂದರೆ ಸರಿಯಲ್ಲ. ಅದೇ ಸ್ಥಳದಲ್ಲಿ ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ ಪೋಲೀಸರು ಪಂಚನಾಮೆ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ನಿಪಿ-1 ಕ್ಕೆ ಸಹಿ ಮಾಡಿರುತ್ತೇನೆ, ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-

ಚಾಸಾ-1 ರವರು ಪಂಚಾಯ್ತಿ ಕಾರ್ಯಾಲಯದಲ್ಲಿ ನನ್ನ ಮೇಲಾಧಿಕಾರಿಗಳು ಎಂದರೆ ಸರಿ. ಆ ಕಾರಣದಿಂದ ಅವರು ಹೇಳುವ ಮಾತುಗಳನ್ನು ನಾನು ಪಾಲಿಸುತ್ತೇನೆಂದರೆ ಸರಿ. ಅವರು ಯಾವ ಸ್ಥಳಕ್ಕೆ ಹೋಗು ಅನ್ನುತ್ತಾರೆ ಅಲ್ಲಿಗೆ ಹೋಗುತ್ತೇನೆ ಮತ್ತು ಅವರು ಯಾವ ದಾಖಲೆಗಳಿಗೆ ಸಹಿ ಮಾಡು ಅನ್ನುತ್ತಾರೆ ಆ ದಾಖಲೆಗಳಿಗೆ ನಾನು ಸಹಿ ಮಾಡುತ್ತೇನೆಂದರೆ ಸರಿ. ಚಾಸಾ-1 ರವರು ಪೋಲೀಸ್ ಠಾಣೆಗೆ ಹೋಗಿನಿಪಿಕ್ಕೆ -1 ಸಹಿಮ ಾಡಿ ಬಾ ಎಂದು ಹೇಳಿದ ಮೇರೆಗೆ ನಾನು ಸದರಿ ದಾಖಲೆಗೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿ. ನಿಪಿ-2 ರ

ದಾಖಲೆಯನ್ನು ಸಹಾ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆಂದರೆ ಸರಿ. ಮು ಮಾ-1 ಕುರ್ಚಿಗಳು ಹೊಸ ಕುರ್ಚಿಗಳಾಗಿರುತ್ತವೆಂದರೆ ಸರಿ. ಇಂತಹ ಕುರ್ಚಿಗಳು ಅಂಗಡಿಯಲ್ಲಿ ಸಾಕಷ್ಟು ಸಿಗುತ್ತವೆಂದರೆ ಸರಿ. ಮು ಮಾ-2 ಗಡಿಯಾರ ಹೊಸದು ಇರುತ್ತದೆಂದರೆ ಸರಿ. ಇಂತಹ ಗಡಿಯಾರಗಳು ಅಂಗಡಿಯಲ್ಲಿ ಸಿಗುತ್ತವೆಂದರೆ ಸರಿ. ಮು ಮಾಲುಗಳನ್ನು ಯಾರು ಕಳುವು ಮಾಡಿರುತ್ತಾರೆ ಮತ್ತು ಯಾರು ತೆಗೆದುಕೊಂಡು ಹೋಗಿರುತ್ತಾರೆನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-3 ಪೋಟೋದಲ್ಲಿ ಗಡಿಯಾರ ಇರುವುದಿಲ್ಲವೆಂದರೆ ಸರಿ. ಲೈಬ್ರರಿ ಮತ್ತು ನಿಪಿ-3 ರ ಪೋಟೋ ತೆಗೆದ ಸ್ಥಳ ಅಕ್ಕಪಕ್ಕ ಇದೆ ಎಂದರೆ ಸರಿ. ಸದರಿ ಮು ಮಾಲುಗಳನ್ನು ಆ ಸ್ಥಳದಲ್ಲಿ ಯಾರಿಟ್ಟಿದ್ದರು ಮತ್ತು ಅದನ್ನು ಯಾರು ತೆಗೆದುಕೊಂಡು ಹೋಗಿದ್ದರೆನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-1 ರ ದಾಖಲೆಗೆ ನಾನು ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿ ಬಂದಿರುತ್ತೇನೆ ಚಾಸಾ-2 ಮತ್ತು 5 ರವರು ಸದರಿ ದಾಖಲೆಗೆ ಯಾವಾಗ ಸಹಿ ಮಾಡಿರುತ್ತಾರೆನ್ನುವುದು ನನಗೆ ಗೊತ್ತಿಲ್ಲ. ಅವರು ನನ್ನ ಜೊತೆ ಸದರಿ ದಾಖಲೆಗೆ ಸಹಿ ಮಾಡಿರುವುದಿಲ್ಲ. ಚಾಸಾ-1 ರವರ ಹೇಳಿಕೆಯಂತೆ ನಾನು ದಾಖಲೆಗೆ ಪೋಲೀಸ್ ಠಾಣೆಯಲ್ಲಿ ಸಹಿ ಮಾಡಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ